

ಗೂಡು ತಯಾರಾದ ಮೇಲೆ ಗೂಡಿನ ಪ್ರವೇಶದ್ವಾರದಿಂದ ಹೊರಗಿಣುಕ್ಕುತ್ತಿರುವ ಗೀಜಗ.

**(6ನೇ ಪುಟ ನೋಡಿ)**

ಇವುಗಳಿಗೆ ಕಷ್ಟವಾಗುತ್ತದೆ. ನಾರನ್ನು ಒಂದು ಸುತ್ತು ಹೆಣೆಯುವುದರೊಳಗೆ ನಾರು ಕೆಳಗಡೆ ಬೀಳುತ್ತವೆ. ಛಲ ಬಿಡದೆ ಮುಂದುವರಿಯುತ್ತವೆ.

ಇಷ್ಟೆಲ್ಲ ಕಾರ್ಯಗಳನ್ನು ಅವಿರತವಾಗಿ ಮಾಡುವ ಗಂಡು ಗೀಜಗಗಳು ಗೂಡು ತಯಾರಾದ ಮೇಲೆ ಗೂಡಿನ ಮೇಲೆ ಕುಳಿತು ಹೆಣ್ಣು ಗೀಜಗಕ್ಕಾಗಿ ರೆಕ್ಕೆಯಾಡಿಸುತ್ತ ಕೂಗಿ ಕರೆಯುವುದು ಇವುಗಳ ಅಂತಿಮ ಕೆಲಸವಾಗಿರುತ್ತದೆ. ಯಾವುದಾದರೂ ಹೆಣ್ಣು ಹಕ್ಕಿ ಅದನ್ನು ಸ್ವೀಕರಿಸಿದ ಮೇಲೆ ಅದು ಮೊಟ್ಟೆ ಇಡುವವರೆಗೆ ಮಾತ್ರ ಅಲ್ಲಿರುತ್ತದೆ. ಆಮೇಲೆ ಗಂಡು ಹಕ್ಕಿ ಅಲ್ಲಿಂದ ಬೇರೆ ಕಡೆ ವಲಸೆ ಹೋಗುತ್ತದೆ. ಆದರೆ ಅಲ್ಲಿಯವರೆಗೂ ಉಳಿದ ಪಕ್ಷಿಗಳಿಂದ ಹೆಣ್ಣು ಗೀಜಗವನ್ನು ರಕ್ಷಿಸುತ್ತದೆ. ಇದು ಪಡುವ ಪರಿಶ್ರಮಕ್ಕೆ  ಕೊನೆ ಕೊನೆಗೆ ಗಂಡು ಗೀಜಗದ ಕೊಕ್ಕುಗಳಲ್ಲಿ ಗಾಯಗಳುಂಟಾಗಿ ಬಣ್ಣ ಕಳೆದುಕೊಳ್ಳುತ್ತದೆ. ಹೆಚ್ಚಿನ ಪಕ್ಷಿಗಳಿಗೆ ನಾರನ್ನು ಸೀಳುವಾಗ ಗಾಯಗಳುಂಟಾಗುತ್ತದೆ.

ಇವುಗಳು ಕಟ್ಟಿದ ಗೂಡುಗಳು ಎಷ್ಟು ಗಟ್ಟಿಮುಟ್ಟಾಗಿರುತ್ತವೆ ಎಂದರೆ ಮಳೆಗಾಲದ ಸಂದರ್ಭದಲ್ಲಿ ಒಂದು ಹನಿ ನೀರು ಕೂಡಾ ಒಳಗಡೆ ಬರುವು-ದಿಲ್ಲ. ಒಂದು ಸಲ ಗೂಡು ಕಟ್ಟಿದ ಮೇಲೆ ಗಂಡು ಹಕ್ಕಿಯು ಮತ್ತೆ ಅದೇ ಗೂಡಿಗೆ ಬರುವುದಿಲ್ಲ. ಅಲ್ಲದೆ ಒಂದು ಸಲ ಮರಿಯಾಗಿ ಆ ಮರಿಗಳು ಹಾರುವುದನ್ನು ಕಲಿತ ಮೇಲೆ ಹೆಣ್ಣು ಹಕ್ಕಿಯೂ ಕೂಡಾ ಆ ಗೂಡಿನಲ್ಲಿ ಇರುವುದಿಲ್ಲ. ಗೂಡು ಕೊನೆಗೆ ಖಾಲಿಯಾಗಿಯೇ ಉಳಿಯುತ್ತದೆ. ಆನಂತರ ಆ ಖಾಲಿ ಗೂಡನ್ನು ಆಶ್ರಯಿಸಲು ಬೇರೆ ಯಾವುದೇ ಪಕ್ಷಿಗಳೂ ಬರುವುದಿಲ್ಲ. ಏಕೆಂದರೆ ಆ ಗೂಡಿನ ರಚನೆ ಬೇರೆ ಪಕ್ಷಿಗಳಿಗೆ ಒಗ್ಗುವುದಿಲ್ಲ. ಸುಂದರವಾದ ಗೂಡುಗಳು ಅನಾಥವಾಗುತ್ತವೆ. ಸಾಮಾನ್ಯವಾಗಿ ಒಂದೇ ಮರದ ಹಲವು ಕೊಂಬೆಗಳಲ್ಲಿ ಇಪ್ಪತ್ತಕ್ಕೂ ಹೆಚ್ಚು ಗೂಡುಗಳನ್ನು ಕಾಣಬಹುದಾಗಿದೆ. ಕೆಲವರು ಅಲಂಕಾರಕ್ಕಾಗಿ ಇಂತಹ ಗೂಡುಗಳನ್ನು ತಂದು ಮನೆಯಲ್ಲಿ ನೇತು ಹಾಕುತ್ತಾರೆ. ಗೀಜಗಗಳು ಯಾರೋ ಮೆಚ್ಚುತ್ತಾರೆಂದು ಗೂಡನ್ನು ನಿರ್ಮಿಸು-ವುದಿಲ್ಲ. ಮೌನವಾಗಿ ಗೂಡನ್ನು ಕಟ್ಟುವ ಇವುಗಳ ತಾಳ್ಮೆ, ಛಲ, ಅಚ್ಚುಕಟ್ಟು-ತನ ನಿಜಕ್ಕೂ ಮನುಷ್ಯನಿಗಿಂತ ಒಂದು ಕೈ ಮೇಲೆ ಎಂದು ಅನ್ನಿಸುತ್ತದೆ.



ಕೊಕ್ಕಿನಿಂದ ನಾರನ್ನು ಎಳೆದೆಳೆದು ಕಟ್ಟುತ್ತಿರುವ ಗೀಜಗ